ಸಾಲದಪಟ್ಟ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಬಲಗು.	ಯಾವಾಗ ದೇಣೀ ಕೊಟ್ಟಿದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಎಂದಹ್ಳೆ ತಿದ್ದಾ ..	50—0—0	..	ಡಿಕರಿ ಬಾಬತು	
2	ವಿರ್ಲೆ ಕೊನ್ನಾರಪಟ್ಟ ..	100—0—0	..	ಆಧಾರ ತಮುನೂಕು ಬಾ	
4	ಡಿಟ್ಟೋ ವೂರು ಲಕ್ಷ್ಮಯ್ಯ ..	50—0—0	..	ಡಿಟೋ	
		200—0—0			

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಮಂಡಿ ಮೊಹಲಾದಲ್ಲಿರುವ ವಿವಾಚಾರದ ಗುರುಶಾಂತಪ್ಪ ಶಾಸ್ತ್ರಿಯಂಬವನ ವಿಷಯದಲ್ಲಿ—

ಸ್ಯ 1889ನೇ ಇಸವಿ ದಿವಾಳೀ ಕೇಸ್ ನಂಬರ್ 175.

ಹುಕುಂ.

ಮೇಲ್ಕಂಡ ಗುರುಶಾಂತಪ್ಪ ಶಾಸ್ತ್ರಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂದವು ಈ ಕೋರ್ಟು ರೂ ಬರೂ ಅರ್ಜೀದಾರನಾದ ಗುರುಶಾಂತಪ್ಪ ಶಾಸ್ತ್ರಿ ಖುದ್ದು ಹಾಜರ್ ಮತ್ತು ಸದರೀಯವನ ಲೇಣೇದಾರ್ರಾದ 1ನೇ (ಲಿ) ಸುಬ್ಬರಾಯರ್ರ ತರಫ್ ಅಡ್ವೊಕೇಟ್ ಶೆ|| ಆನಂದರಾಯರು ಇವರಿಗೂ ದರ್ಯಾಫ್ತ್ ಮಾಡಲ್ಪಟ್ಟತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟಿಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗುರುಶಾಂತಪ್ಪ ಶಾಸ್ತ್ರಿಯಂಬವನು ಹೊಂದುವದಕ್ಕೆ ಪಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಅದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಆಗಸ್ಟ್ಟ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟತು.

ಸಾಲದಪಟ್ಟ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದಅವರುಗಳ ವಾಸಸ್ಥಳ.	ಜೊಬಲಗು.	ಯಾವಾಗ ದೇಣೀ ಕೊಟ್ಟಿದ್ದರು	ದೇಣಿಯ ಸ್ವಭಾವಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ಫುಷ್ಪವತಿ ಬ್ಯಾಂಕ್ (ಲಿ) ಸುಬ್ಬರಾಯ ಅಯ್ಯರ್	190 0 0	..	ಡಿಕರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ಮೈಸೂರು 20ನೇ ಜುಲೈ ಸ್ಯ 1889ನೇ ಇಸವಿ.

ಖರೀದಿಗೆ ಯಿರುವ ಆನೆಗಳು.

ಮೈಸೂರು ಶೀಮೆಯ ಕೆಡ್ಡಾದಲ್ಲಿ ಈಚಿಗೆ ಹಿಡಿಯಲ್ಪಟ್ಟ ಚಿಕ್ಕ ಪ್ರಾಯವಾಗಿಯೂ ಪಳ್ಳೀ ಸ್ಥಿತಿಯಲ್ಲಿಯೂ ಮತ್ತು ಬೇರೆಬೇರೆ ಸೇಜಂ ಉಳ್ಳದ್ದಾಗಿಯೂ ಇರುವ ಹೆಣ್ಣು ಮತ್ತು ಗಂಡು 29 ಆನೆಗಳು ಸ್ಯ 1889ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನ ದಿನ ಮೈಸೂರಿಗೆ 14 ಮೈಲಿ ಫಾಸಲೆಯಲ್ಲಿರುವ ನಂಜನಗೂಡಿನಲ್ಲಿ ಬಹಿರಂಗವಾದ ಹರಾಜು ಮೂಲಕ ಮಾರಲ್ಪಡುತ್ತವೆ. ಹರಾಜು ಕಾಲಕ್ಕೆ ಹಾಜರಾಗಲು ಅನುಕೂಲ ವಿಲ್ಲದವರು ತಮಗಾಗಿ ಖರೀದಿಗೆ ತೆಗಿಯುವಂತೆ ಈ ಕೆಳಗೆ ರುಜು ಮಾಡಿರುವವರಿಗೆ ಬರದುಕೊಳ್ಳಬಹುದು

ಮತ್ತು ಹಾಂಗೆ ಬರಿಯುವರು ಯಿಷ್ಟರವರಿಗೆ ಸವಾಲ್ ಮಾಡತಕ್ಕದ್ದೆಂತ ನಮೂದಿಸುತ್ತಾರೋ ಆಷ್ಟರವರಿಗೆ ಸವಾಲ್ ಮಾಡಲ್ಪಡುತ್ತೆ. ಹೀಂಗೆ ಬರಿಯತಕ್ಕ ಪ್ರತಿ ಒಬ್ಬರೂ ತಮ್ಮ ಕಾಗದದ ಸಂಗಡ 300 ರೂಪಾಯಿ ಕಳುಹಿಸಬೇಕು. ಇಲ್ಲವಾಯಿತೆ ಅಂಥಾ ಕಾಗದಕ್ಕೆ ನಿಗೆ ಕೊಡಲ್ಪಡುವದಿಲ್ಲ, ಆನೆ ಖರೀದಿಗೆ ತೆಗಿಯಲ್ಪಡದ ಸಂದರ್ಭದಲ್ಲಿ ಮೊಬಲಗ್ ವಾಪಸ್ ಮಾಡಲ್ಪಡುತ್ತೆ.

2. ಆನೆಗಳ ತಪಸೀಲ್‌ಪಟ್ಟಿ ಈ ಕೆಳಗೆ ನಮೂದಿಸಲ್ಪಟ್ಟಿದೆ. ಬೇಕಾದವರು ಈ ಕೆಳಗೆ ರುಜುಮಾಡಿ ಯಿರತಕ್ಕವರಿಗೆ ಬರದು ಕೊಂಪೆಲ್ಲಿ ಕಳುಹಿಸಲ್ಪಡುವದು.

3. ಆನೆಗಳನ್ನ ರೈಲ್‌ಮೇಲೆ ನಡಿಸುವದಕ್ಕೆ ಬೇಕಾದ ಕುಮ್ಮಕ್ಕು ಬೇಡಿದಲ್ಲಿ ಕೊಡಲ್ಪಡುವದು.

4. ಬೇಕಾದಾ 25 ರೂಪಾಯಿ ಮೇರೆ ಬೇವಣಿ ಮೊಬಲಗು ಸವಿಾಪವಾಗಿ ಯಿರುವ ತಾಲ್ಲೂಕು ಖಜಾನೆಗೆ ಕೂಡ್ಲೆ ಪಾವತಿಮಾಡಬೇಕು. ಬಾಕಿ ಮೊಬಲಗನ್ನ ಪರಾಜು ತಾರೀಖು ಲಾಗಾಯತು 15 ದಿವಸದ ವಳಗಾಗಿ ಮತ್ತು ಆನೆಗಳನ್ನ ನಡಿಸುವದಕ್ಕೆ ಮುಂಚೆ ಪಾವತಿ ಮಾಡಬೇಕು. ತಪ್ಪಿದ ಪಕ್ಷದಲ್ಲಿ ಆ ಖರೀದಿದಾರನ ಅವಗುಣಕ್ಕೆ ಆನೆಗಳು ಪುನಃ ಪರಾಜು ಮಾಡಲ್ಪಡುವವು. ಅಂತಾ ಪರಾಜಿನಲ್ಲಿ ಜಾಸ್ತಿ ಯೇನಾದರೂ ಹುಟ್ಟುವಳಿ ಆದರೆ ಅದಕ್ಕೆ ಅವ್ವಲ್ ಖರೀದಿದಾರನಿಗೆ ಹಕ್ಕು ಯಿರುವದಿಲ್ಲ.

ಖರೀದಿಗೆ ತೆಗದುಕೊಂಡ ತಾರೀಖು ಲಾಗಾಯತು ಆನೆಗಳ ದಾಣಾಚಾರಾ ವಗೈರೆ ಖರ್ಚುಗಳು ಖರೀದಿದಾರ ವಹಿಸತಕ್ಕದ್ದು.

ನಂಬರ್.	ಜಾತಿ.	ಎತ್ತರ. ಅಡಿಗಳು.	ಅಂಗುಲಗಳು.	ಮುಮ್ಮಾರು ವಯಸ್ಸು.	ಕೊಂಬುಗಳು ಉಳ್ಳವು ಯಾವದಾದರೂ ಇದ್ದರೆ.	ಉಗುರುಗಳು	ಬಾಲ ಪೂರ್ತಿ ಯಾ ಅಪೂರ್ತಿಯೆ.	ಷರಾ.
1	ಹೆಂಣು ..	7	0	13		18	ಪೂರ್ತಿಯಾಗಿಧೆ	
2	ಡಿಟೋ ..	7	0	25		18	ಕೊಂಚ ಅಪೂರ್ತಿಯಾಗಿಧೆ	
3	ಡಿಟೋ ..	6	10	15		18	ಪೂರ್ತಿಯಾಗಿಧೆ	
4	ಡಿಟೋ ..	7	2	25		18	ಕೊಂಚ ಅಪೂರ್ತಿಯಾಗಿಧೆ	5ನೇ ನಂಬರ್ ಆನೆ ವುಳಿಸಿಕೊಳ್ಳಲ್ಪಟ್ಟಿರುತ್ತೆ.
6	ಕೊಂಬು ವುಳ್ಳದ್ದು ..	6	5	10	ಒಳ್ಳೀದು	18	ಪೂರ್ತಿಯಾಗಿಧೆ	
7	ಹೆಂಣು ..	6	3	11		18	ಪೂರ್ತಿಯಾಗಿಧೆ	
8	ಕೊಂಬು ವುಳ್ಳದ್ದು ..	7	10	15	ಬಹಳ ಒಳ್ಳೀದು	18	ಪೂರ್ತಿಯಾಗಿಧೆ	
9	ಡಿಟೋ ..	7	2	16	ಡಿಟೋ	18	ಪೂರ್ತಿಯಾಗಿಧೆ	
10	ಹೆಂಣು ..	7	9	35		18	ಅಪೂರ್ತಿಯಾಗಿಧೆ	
11	ಡಿಟೋ ..	5	10	10		18	ಪೂರ್ತಿಯಾಗಿಧೆ	
12	ಕೊಂಬು ವುಳ್ಳದ್ದು ..	7	4	14	ಬಹಳ ಒಳ್ಳೀದು	18	ಪೂರ್ತಿಯಾಗಿಧೆ	
13	ಡಿಟೋ ..	4	11	5	ಒಳ್ಳೀದು	18	ಪೂರ್ತಿಯಾಗಿಧೆ	
14	ಡಿಟೋ ..	5	9	7	ಡಿಟೋ	18	ಪೂರ್ತಿಯಾಗಿಧೆ	
15	ಹೆಂಣು ..	5	1	6		18	ಪೂರ್ತಿಯಾಗಿಧೆ	
16	ಡಿಟೋ ..	5	8	7		18	ಪೂರ್ತಿಯಾಗಿಧೆ	
17	ಡಿಟೋ ..	5	6	6		18	ಪೂರ್ತಿಯಾಗಿಧೆ	
18	ಡಿಟೋ ..	6	2	10		18	ಪೂರ್ತಿಯಾಗಿಧೆ	
19	ಕೊಂಬು ವುಳ್ಳದ್ದು ..	6	3	10	ಬಹಳ ಒಳ್ಳೀದು	18	ಪೂರ್ತಿಯಾಗಿಧೆ	
20	ಹೆಂಣು ..	5	2	6		18	ಪೂರ್ತಿಯಾಗಿಧೆ	
21	ಕೊಂಬು ವುಳ್ಳದ್ದು ..	5	3	5		18	ಪೂರ್ತಿಯಾಗಿಧೆ	
22	ಹೆಂಣು ..	4	5	2		18	ಪೂರ್ತಿಯಾಗಿಧೆ	
23	ಡಿಟೋ ..	4	7	2		18	ಪೂರ್ತಿಯಾಗಿಧೆ	
24	ಡಿಟೋ ..	4	4	1½		18	ಪೂರ್ತಿಯಾಗಿಧೆ	
25	ಕೊಂಬು ವುಳ್ಳದ್ದು ..	5	1	3		18	ಪೂರ್ತಿಯಾಗಿಧೆ	
26	ಹೆಂಣು ..	5	0	5		18	ಪೂರ್ತಿಯಾಗಿಧೆ	
27	ಕೊಂಬು ವುಳ್ಳದ್ದು ..	5	4	5	ಒಳ್ಳೀದು	18	ಪೂರ್ತಿಯಾಗಿಧೆ	
28	ಡಿಟೋ ..	4	0	3		18	ಪೂರ್ತಿಯಾಗಿಧೆ	29ನೇ ನಂಬರ್ ಆನೆವುಳಿಸಿಕೊಳ್ಳಲ್ಪಟ್ಟಿರುತ್ತೆ.
30	ಹೆಂಣು ..	5	1	4		18	ಪೂರ್ತಿಯಾಗಿಧೆ	
31	ಕೊಂಬು ವುಳ್ಳದ್ದು ..	6	0	7	ಒಳ್ಳೀದು	18	ಪೂರ್ತಿಯಾಗಿಧೆ	
29								

ಜಿ. ಪಿ. ಸಾಂಪರ್ಸ್,
ಸೂಪರ್‌ಟೆಂಡೆಂಟ್ ಆಫ್ ಕೆಡ್ಡಾಸ್.
(ಆನೆ ಸ್ಪೆಷಲ್ ಡ್ಯೂಟಿ) ಮೈಸೂರು.